# ಕರ್ನಾಟಕ ಲೋಕಾಯುಕ್ತ

ಕಂ/ಉಪಲೋಕ್/ಎಂವೈಎಸ್/1036/2021/ಪಿ.ಓ.ಎ.ಆರ್.ಇ-05 ಬಹುಮಹಡಿಗಳ ಕಟ್ಟಡ,
ಡಾ. ಬಿ.ಆರ್.ಅಂಬೇಡ್ಕರ ವಿಧಿ,
ಬೆಂಗಳೂರು ದಿನಾಂಕ :22/12/2021

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: **ಶ್ರೀ ಗುರುಪ್ರಸಾದ್ ವಿ.ಎಂ ಬಿನ್ ಪದ್ಮನಾಭ್, ಗ್ರಾಮ ಲೆಕ್ಕಾಧಿಕಾರಿ, ನಿಟ್ಟೆ ಗ್ರಾಮ, ಗುರುನಿವಾಸ, ಬೋಂಡು ಕುಮೇರಿ, ಅಜೇಕಾರು, ಮರ್ಣೆ ಗ್ರಾಮ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಸರ್ಕಾರಿ ನೌಕರರಾಗಿ ಕೆಲಸ ನಿರ್ವಹಿಸುವ ಕಾಲಕ್ಕೆ ದುರ್ನಡತೆ ಎಸಗಿರುವ ಕುರಿತಂತೆ ಶಿಸ್ತು ನಡವಳಿ ಜರುಗಿಸುವ ಬಗ್ಗೆ.**

*****

1. ಮಾನ್ಯ ಆರಕ್ಷಕ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ ಪೋಲಿಸ್ ಠಾಣೆ, ಉಡುಪಿ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಸಲಾಗಿ **ಶ್ರೀ ಗುರುಪ್ರಸಾದ್ ವಿ.ಎಂ ಬಿನ್ ಪದ್ಮನಾಭ್, ಗ್ರಾಮ ಲೆಕ್ಕಾಧಿಕಾರಿ, ನಿಟ್ಟೆ ಗ್ರಾಮ, ಗುರುನಿವಾಸ, ಬೋಂಡು ಕುಮೇರಿ, ಅಜೇಕಾರು, ಮರ್ಣೆ ಗ್ರಾಮ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ). ಇವರ ವಿರುದ್ಧ ದೂರುದಾರರಾದ **ಕೆ. ವಿನಾಯಕ ಪೈ ಬಿನ್ ಸೋಮನಾಥ ಪೈ, ಶ್ರೀವತ್ಸ ಕೈಲಾಜೆ, ದೇವಸ್ಥಾನ ರಸ್ತೆ, ಅತ್ತೂರು, ನಿಟ್ಟೆ ಗ್ರಾಮ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ). ಇವರು ದೂರನ್ನು ಸಲ್ಲಿಸಿದ್ದು, ತನಿಖಾ ವರದಿಯನ್ನು ಪರಿಶೀಲಿಸಲಾಗಿ, ದೂರುದಾರರು ನಿಟ್ಟೆ ಗ್ರಾಮದ ಸ.ನಂ.496/2 ರಲ್ಲಿ 5 ಎಕರೆ ಜಮೀನು ಖರೀದಿ ಮಾಡಿದ್ದು, ಖರೀದಿ ಪತ್ರದ ಅನ್ವಯ ಆರ್.ಟಿ.ಸಿ.ಯಲ್ಲಿ ಖಾತೆ ಬದಲಾವಣೆ ಮಾಡಲು ಕಾರ್ಕಳ ತಹಶೀಲ್ದಾರ್ ಕಚೇರಿಗೆ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯನ್ನು ತಹಶೀಲ್ದಾರವರು ತಿರಸ್ಕರಿಸಿದ್ದು, ತಿರಸ್ಕರಿಸಿದ ಬಗ್ಗೆ ಹಿಂಬರಹವನ್ನು 3 ದಿನಗಳೊಳಗಾಗಿ ಜಾರಿ ಮಾಡಲು ಎದುರುದಾರರಿಗೆ ತಿಳಿಸಿದ್ದರೂ ಸಹ, ಲಂಚ ತೆಗೆದುಕೊಳ್ಳುವ

ದುರುದ್ದೇಶದಿಂದ ತಿರಸ್ಕರಿಸಿದ ಹಿಂಬರಹವನ್ನು ಜಾರಿ ಮಾಡದೇ ಹಾಗೇ ಇಟ್ಟುಕೊಂಡು, ದಿನಾಂಕ 01-06-2017ರಂದು ದೂರುದಾರಿಗೆ ಫೋನ್ ಮಾಡಿ ನಾಲ್ಕೈದು ಸಾವಿರ ಲಂಚ ನೀಡಿದರೆ ಖರೀದಿ ಪತ್ರದ ಪ್ರಕಾರ ಖಾತೆ ಬದಲಾವಣೆ ಮಾಡಿಸಿಕೊಡುವುದಾಗಿ ಹೇಳಿ ಎದುರುದಾರರು ಲಂಚದ ಹಣಕ್ಕಾಗಿ ಬೇಡಿಕೆಯಿಟ್ಟು / ಪಡೆದುಕೊಂಡು ದುರ್ನಡತೆ ತೋರಿಸಿರುತ್ತಾರೆಂದು ಸಲ್ಲಿಸಿದ ವರದಿಯ ಮೇರೆಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(1) ರ ಅನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತವಾಗಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆ.

2. <u>ಪ್ರಕರಣದ ಸಂಕ್ಷಿಪ್ತ ಸಾರಾಂಶ:-</u>

I. ದೂರುದಾರರಾದ ಶ್ರೀ ವಿನಾಯಕ ಪೈ ಬಿನ್ ಸೋಮನಾಥ ಪೈ, ಇವರು ನಿಟ್ಟೆ ಗ್ರಾಮದ ಸ.ನಂ.496/2 ರಲ್ಲಿ 5 ಎಕರೆ ಜಮೀನು ಖರೀದಿ ಮಾಡಿದ್ದು, ಖರೀದಿ ಪತ್ರದ ಅನ್ವಯ ಆರ್.ಟಿ.ಸಿ.ಯಲ್ಲಿ ದಾಖಲಿಸಲು ಕಾರ್ಕಳ ತಹಶೀಲ್ದಾರ್ ಕಚೇರಿಗೆ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯನ್ನು ತಹಶೀಲ್ದಾರವರು ತಿರಸ್ಕರಿಸಿದ್ದು, ತಿರಸ್ಕರಿಸಿದ ಬಗ್ಗೆ ಹಿಂಬರಹವನ್ನು 3 ದಿನಗಳೊಳಗಾಗಿ ಜಾರಿ ಮಾಡಲು ಎದುರುದಾರರಿಗೆ ತಿಳಿಸಿದ್ದರೂ ಸಹ ಲಂಚ ತೆಗೆದುಕೊಳ್ಳುವ ದುರುದ್ದೇಶದಿಂದ ತಿರಸ್ಕರಿಸಿದ ಹಿಂಬರಹವನ್ನು ಜಾರಿ ಮಾಡದೇ ಹಾಗೇ ಇಟ್ಟುಕೊಂಡು, ದಿನಾಂಕ 01-06-2017ರಂದು ದೂರುದಾರಿಗೆ ಫೋನ್ ಮಾಡಿ ನಾಲ್ಕೈದು ಸಾವಿರ ಲಂಚ ನೀಡಿದರೆ ಖರೀದಿ ಪತ್ರದ ಪ್ರಕಾರ ಪಹಣಿ ದಾಖಲ್ ಮಾಡಿಸಿಕೊಡುವುದಾಗಿ ಬೇಡಿಕೆ ಇಟ್ಟಿರುತ್ತಾರೆ. ಅದನ್ನು ದೂರುದಾರರು ತಮ್ಮ ಮೊಬೈಲ್ ನಂ.9964755414 ರಲ್ಲಿ ತುಳು ಭಾಷೆಯಲ್ಲಿ ಮಾತನಾಡಿದ್ದನ್ನು ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣವನ್ನು ನೀಡಲು ಮನಸ್ಸಿಲ್ಲವಾದ್ದರಿಂದ ದಿನಾಂಕ 01-06-2017 ರಂದು ಉಡುಪಿ ಭ್ರಷ್ಟಾಚಾರ ನಿಗ್ರಹದಳ ಪೋಲೀಸ್ ಠಾಣೆಗೆ ದೂರು ಸಲ್ಲಿಸಿದ್ದು ಸದರಿ ದೂರು ಠಾಣಾ ಗುನ್ನೆ ನಂ.05/17 ರಲ್ಲಿ ಕಲಂ 7, 13 (1)(ಡಿ) ರೆ/ವಿ. 13(2) ಭ್ರಷ್ಟಾಚಾರ ನಿಗ್ರಹ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

II. ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಮಧುಕರ್ (ನೆರಳುಸಾಕ್ಷಿ), 2) ಸುಭಾಷ್ ಚಂದ್ರ ಇವರುಗಳನ್ನು ಬರಮಾಡಿಕೊಂಡು, ಸದರಿಯವರ ಸಮಕ್ಷಮ ದೂರುದಾರರು ಮೊಬೈಲ್‌ನ್ನು ಹಾಜರುಪಡಿಸಿದ್ದು, ಸದರಿ ಮೊಬೈಲ್‌ನಲ್ಲಿ ದಾಖಲಾಗಿದ್ದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ, ಸದರಿ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಸಂಭಾಷಣೆಯನ್ನು ಕೇಳಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡುಬರುತ್ತದೆ. ದೂರುದಾರರು ಲಂಚ ನೀಡಲು ತಂದ 4,000/– (2000 x 2) ರೂ. ಹಣವನ್ನು ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಪಂಚರು ಬಿಳಿ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ಸದರಿ ನೋಟುಗಳಿಗೆ ಪೊಲೀಸ್ ಸಿಬ್ಬಂದಿಯವರು ಫಿನಾಪ್ತಲಿನ್ ಪೌಡರನ್ನು ಲೇಪಿಸಿದ್ದು, ಸದರಿ ಹಣವನ್ನು ಪಂಚಸಾಕ್ಷಿ ಮಧುಕರ್ ಇವರ ಮೂಲಕ ದೂರುದಾರರ ಶರ್ಟ್ ಜೇಬಿನಲ್ಲಿ ಇಡಿಸಿರುತ್ತಾರೆ. ನೆರಳುಸಾಕ್ಷಿ ಮಧುಕರ್ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಗಳನ್ನು ಹಾಗೂ ವಿದ್ಯಮಾನಗಳನ್ನು ಗಮನಿಸಲು ಸೂಚಿಸಿರುತ್ತಾರೆ. ಪಂಚಸಾಕ್ಷಿ ಮಧುಕರ್ ಇವರ ಎರಡೂ ಕೈಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಸದರಿ ದ್ರಾವಣದ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ವಿವರಿಸಿರುತ್ತಾರೆ. ಲಂಚ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಗಳನ್ನು ರೆಕಾರ್ಡ್ ಮಾಡಿಕೊಳ್ಳಲು ವಾಯ್ಸ್ ರೆಕಾರ್ಡರ್ ನೀಡಿರುತ್ತಾರೆ. ಎದುರುದಾರರು ಹಣ ಪಡೆದುಕೊಂಡ ನಂತರ ತಲೆ ಒರೆಸಿಕೊಳ್ಳುವ ಮೂಲಕ ಸಂಜ್ಞೆ ನೀಡುವಂತೆ ಸೂಚಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 02/06/2017 ರಂದು ಎಸಿಬಿ ಪೊಲೀಸ್ ಠಾಣೆ ಉಡುಪಿಯಲ್ಲಿ ಬೆಳಿಗ್ಗೆ 8.00 ರಿಂದ 10.15 ಗಂಟೆಯವರೆಗೆ ಬರೆದ ಮಹಜರಿನಲ್ಲಿ ದಾಖಲಿಸಿರುತ್ತಾರೆ.

III. ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿತಂಡದವರು ಬೆಳಿಗ್ಗೆ 11.10 ಗಂಟೆಗೆ ಕಾರ್ಕಳವನ್ನು ತಲುಪಿ, ವಾಹನಗಳನ್ನು ರಸ್ತೆಯಲ್ಲಿ ನಿಲ್ಲಿಸಿ, ಕಾರ್ಕಳದ ತಾಲ್ಲೂಕು ಕಚೇರಿ

ಆವರಣದೊಳಗೆ ದಾಳಿತಂಡದವರು ಅಲ್ಲಲ್ಲಿ ಸಂಶಯ ಬರದಂತೆ ನಿಂತುಕೊಂಡಿದ್ದು, ನೆರಳುಸಾಕ್ಷಿ ಹಾಗೂ ದೂರುದಾರರನ್ನು ಕಚೇರಿ ಒಳಗೆ ಕಳುಹಿಸಿರುತ್ತಾರೆ. ದೂರುದಾರರು ಎದುರುದಾರರಿಗೆ ಫೋನ್ ಮಾಡಲಾಗಿ ತಾನು ತಾಲ್ಲೂಕು ಕಚೇರಿಯಲ್ಲಿ ಇರುವುದಾಗಿ ತಿಳಿಸಿ, ಕಚೇರಿಯ ಆವರಣಕ್ಕೆ ಬಂದಿದ್ದು, ಬೆಳಿಗ್ಗೆ ಸುಮಾರು 11.25 ಗಂಟೆ ಸಮಯಕ್ಕೆ ಕಚೇರಿ ಆವರಣದಲ್ಲಿ ದೂರುದಾರರಿಂದ ಎದುರುದಾರರು ಹಣ ಪಡೆದುಕೊಂಡಿರುತ್ತಾರೆ. ನಂತರ, ದೂರುದಾರರು ಸಂಜ್ಞೆ ನೀಡಿದ ತಕ್ಷಣ ದಾಳಿತಂಡದವರು ಕಚೇರಿ ಒಳಗೆ ಬಂದು ಎದುರುದಾರರಿಗೆ ತಮ್ಮ ಪರಿಚಯ ಮಾಡಿಕೊಂಡು ಪ್ರಕರಣ ದಾಖಲಾದ ಬಗ್ಗೆ ತಿಳಿಸಿ ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ. ಹಣದ ಬಗ್ಗೆ ವಿಚಾರಿಸಲಾಗಿ ಎದುರುದಾರರು ಶರ್ಟ್ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ. ಎದುರುದಾರರ ಎರಡೂ ಕೈಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಎದುರುದಾರರು ತನಿಖಾಧಿಕಾರಿಯವರ ಸೂಚನೆ ಮೇರೆಗೆ ಜೇಬಿನಲ್ಲಿದ್ದ ಹಣವನ್ನು ಹಾಜರುಪಡಿಸಿದ್ದು, ಪಂಚರು ಸದರಿ ನೋಟುಗಳ ನಂಬರುಗಳನ್ನು ಈ ಮೊದಲು ದಾಖಲಿಸಿದ ನಂಬರ್‌ಗಳೊಂದಿಗೆ ತಾಳೆ ಹೊಂದಿದ ಮೇರೆಗೆ ಹಣವನ್ನು ತನಿಖಾಧಿಕಾರಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ದೂರುದಾರರಿಗೆ ನೀಡಿದ ವಾಯ್ಸ್ ರೆಕಾರ್ಡರನ್ನು ಪ್ಲೇ ಮಾಡಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಯಿತು. ಸಂಭಾಷಣೆಯು ತುಳು ಭಾಷೆಯಲ್ಲಿದ್ದು ಅದನ್ನು ಕನ್ನಡಕ್ಕೆ ಅನುವಾದಿಸಿ, ಸಿ.ಡಿ.ಗೆ ವರ್ಗಾಯಿಸಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಎದುರುದಾರರ ಮೇಲಾಧಿಕಾರಿ ಉಪತಹಶೀಲ್ದಾರ್ ಆದ ಶ್ರೀ. ಗಣೇಶ್‌ರವರಿಗೆ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡ ಸಂಭಾಷಣೆಯನ್ನು ಕೇಳಿಸಲಾಗಿ, ಅದರಲ್ಲಿದ್ದ ಒಂದು ಧ್ವನಿಯು ಎದುರುದಾರರದೆಂದು ಗುರುತಿಸಿರುತ್ತಾರೆ. ಎದುರುದಾರರಿಂದ ಸ್ವರಕ್ಷಣಾ ಹೇಳಿಕೆ ಪಡೆದುಕೊಂಡಿದ್ದು, ಅದರಲ್ಲಿ ದೂರುದಾರರು ತನ್ನ ಶರ್ಟ್‌ಜೇಬಿನಲ್ಲಿ ಹಣವನ್ನು ತುರುಕಿರುತ್ತಾರೆ. ಇದರಲ್ಲಿ ನನ್ನ ತಪ್ಪು ಏನೂ ಇರುವುದಿಲ್ಲ ಎಂದು ಬರೆದುಕೊಟ್ಟಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದ ಕಡತದ ದೃಢೀಕೃತ ನಕಲು ದಾಖಲೆಗಳನ್ನು ತನಿಖಾಧಿಕಾರಿಯವರು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ದೂರುದಾರರು ಹಾಗೂ ನೆರಳುಸಾಕ್ಷಿ ಮಧುಕರ್‌ರವರು

ಎದುರುದಾರರು ಬರೆದುಕೊಟ್ಟ ಸಮಜಾಯಿಷಿ ಸುಳ್ಳು ಎಂದು ನುಡಿದಿರುತ್ತಾರೆ. ಎದುರುದಾರರಿಗೆ ಬೇರೆ ಶರ್ಟಿನ ವ್ಯವಸ್ಥೆ ಮಾಡಿ ಶರ್ಟನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಈ ಎಲ್ಲಾ ನಡೆವಳಿಗಳನ್ನು ದಿ: 02/06/2017 ರಂದು ಕಾರ್ಕಳ ತಾಲ್ಲೂಕು ಕಚೇರಿಯ ರೂಂ. ನಂ.9(ಎ) ದಲ್ಲಿ ಬೆಳಿಗ್ಗೆ 11.30 ರಿಂದ 5.30 ಗಂಟೆವರೆಗೆ ಬರೆದ ಮಹಜರಿನಲ್ಲಿ ದಾಖಲಿಸಿರುತ್ತಾರೆ.

IV. ದಿ: 07/06/2017 ರಂದು ಉಡುಪಿ ಪೊಲೀಸ್ ಠಾಣೆಯಲ್ಲಿ ಎದುರುದಾರರು ಟ್ರ್ಯಾಪ್ ಸಮಯದಲ್ಲಿ ನಡೆಸಿದ ಸಂಭಾಷಣೆಯ ಲಿಪಿಯ ಪ್ರತಿಯನ್ನು ಆರು ಬಾರಿ ಹೇಳಿಸುವ ಮೂಲಕ ಮಾದರಿಧ್ವನಿಯನ್ನು ರೆಕಾರ್ಡ್ ಮಾಡಿಕೊಂಡಿರುತ್ತಾರೆ. ನಂತರ ಲಂಚಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯ ಲಿಪಿಯ ಪ್ರತಿಯನ್ನು ಕೊಟ್ಟು ಆರು ಬಾರಿ ದೂರುದಾರರ ಮೊಬೈಲ್‌ನಿಂದ ತನಿಖಾಧಿಕಾರಿಯ ಮೊಬೈಲ್‌ಗೆ ಮಾತನಾಡಿಸಿ, ಅದನ್ನು ರೆಕಾರ್ಡ್ ಮಾಡಿಕೊಂಡು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಈ ಬಗ್ಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ.

V. ಎದರುದಾರರ ಎರಡು ಕೈಬೆರಳುಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಹಾಗೂ ಶರ್ಟ್ ಜೇಬಿನಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದು ತಜ್ಞರ ವರದಿಯಿಂದ ಕಂಡುಬರುತ್ತದೆ.

VI. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತಾರೆ. ಎದುರುದಾರರನ್ನು ಸೇವೆಯಿಂದ ವಜಾ ಮಾಡುವ ಪ್ರಾಧಿಕಾರದಿಂದ ಸದರಿಯವರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಪಡೆದುಕೊಂಡಿರುತ್ತಾರೆ.

3. ಪರಿವೀಕ್ಷಣಾ ಟಿಪ್ಪಣಿಗೆ ಎದುರುದಾರರು ತಮ್ಮ ಸಮಜಾಯಿಷಿಯನ್ನು ಸಲ್ಲಿಸಿದ್ದು, ಸದರಿಯವರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ಅಂಶವೇನೆಂದರೆ, ತನ್ನ ಮೇಲೆ ಸ್ಪೆಷಲ್ ಕೇಸ್ ನಂ.25/2018 ರಲ್ಲಿ ಉಡುಪಿ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇದ್ದು, ಯಾವುದೇ ಆಪಾದನೆಗಳು ಸಾಬೀತಾಗಿರುವುದಿಲ್ಲ. ತನ್ನನ್ನು ಯಾರು ಸಂಪರ್ಕಿಸಿರುವುದಿಲ್ಲ, ತಾನು ಯಾವುದೇ ದುರ್ನಡತೆ ತೋರಿಲ್ಲ, ಸಂಭಾಷಣೆಗೂ ಹಾಗೂ ಹಣಕ್ಕೂ ಮತ್ತು ತನಗೂ ಯಾವುದೇ ಸಂಬಂಧವಿಲ್ಲ, ದೂರುದಾರರು ಸುಳ್ಳು ದೂರನ್ನು ಸೃಷ್ಟಿಸಿರುತ್ತಾರೆ. ಪೊಲೀಸರು ಮಹಜರ್ ಮಾಡಿರುವುದಿಲ್ಲ ಮತ್ತು ಸುಳ್ಳು ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದು ನಿವೇದಿಸಿಕೊಂಡು, ಪ್ರಕರಣವನ್ನು ಕೈ ಬಿಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

4. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಒಪ್ಪದಿರಲು ಹಾಗೂ ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವುಗಳನ್ನು ನಂಬಲು ಈ ಹಂತದಲ್ಲಿ ಸಾಕಷ್ಟು ಆಧಾರಗಳಿರುವುದಿಲ್ಲ. ಎದುರುದಾರರು ನಾಲ್ಕೈದು ಸಾವಿರ ರೂಪಾಯಿ ಲಂಚಕ್ಕೆ ಬೇಡಿಕೆ ಇಟ್ಟು, 4,000/- ರೂ. ಪಡೆದುಕೊಳ್ಳುವಾಗ ರೆಡ್‌ಹ್ಯಾಂಡಾಗಿ ಸಿಕ್ಕಿರುತ್ತಾರೆ. ಉಡುಪಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಗೆ ಬಾಕಿ ಇದ್ದ ಮಾತ್ರಕ್ಕೆ ಇಲಾಖಾ ವಿಚಾರಣೆಯನ್ನು ಕೈಬಿಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಶಿಸ್ತು ಪ್ರಕರಣದಲ್ಲಿ ಎದುರುದಾರರು ದುರ್ನಡತೆ ಎಸಗಿರುತ್ತಾರೋ ಅಥವಾ ಇಲ್ಲವೋ ಎಂಬುದನ್ನು ಮಾತ್ರ ಪರಿಗಣಿಸಬೇಕಾಗುತ್ತದೆ. ಕ್ರಿಮಿನಲ್ ಮೊಕದ್ದಮೆಯ ಉದ್ದೇಶ ಹಾಗೂ ಇಲಾಖಾ ವಿಚಾರಣೆಯ ಉದ್ದೇಶ ಬೇರೆಬೇರೆಯಾಗಿದ್ದು, ಸದರಿ ವಿಚಾರಣೆಗಳನ್ನು ಏಕ ಕಾಲದಲ್ಲಿ ನಡೆಸಬಹುದೆಂದು ಸರ್ವೋಚ್ಚ ನ್ಯಾಯಾಲಯವು ಅನೇಕ ತೀರ್ಪುಗಳಲ್ಲಿ ಉಲ್ಲೇಖಿಸಿರುತ್ತದೆ. ಎದುರುದಾರರು ದುರ್ನಡತೆ ಎಸಗಿದ ಬಗ್ಗೆ ಮೇಲ್ನೋಟದಲ್ಲಿ ಸಾಕಷ್ಟು ಪುರಾವೆಗಳು ಕಂಡುಬಂದಿರುವುದರಿಂದ, ಇಲಾಖಾ ವಿಚಾರಣೆ ನಡೆಸುವುದು ಆಡಳಿತಾತ್ಮಕ ದೃಷ್ಟಿಯಿಂದ ಅವಶ್ಯವಿರುತ್ತದೆ.

5. ತನಿಖಾಧಿಕಾರಿ ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಎದುರುದಾರರು ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ಧೆಯನ್ನು ಹೊಂದಿರದೆ ಮೇಲ್ಕಂಡಂತೆ

ಭ್ರಷ್ಟಾಚಾರವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, ಎದುರುದಾರರು ಕ.ನಾ.ಸೇ. (ನಡತೆ) ನಿಯಮ, 1966, 3(1) (i) to (iv) ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ. ಆದ್ದರಿಂದ ಎದುರುದಾರರು ಎಸಗಿದ ದುರ್ನಡತೆಗೆ ಇಲಾಖಾ ವಿಚಾರಣೆ ನಡೆಸುವುದು ಅತೀ ಅವಶ್ಯವಿರುತ್ತದೆ.

6. ಆದ್ದರಿಂದ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14 (ಎ) ಅನ್ವಯ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಅನುಮತಿಸಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು (3) ತಿಂಗಳ ಒಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

22/12/21

(ನ್ಯಾಯಮೂರ್ತಿ ಬಿ. ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.